## ಕವಿತೆ



ಮೀನಾ ಮೈಸೂರು
ಕಲೆ: ಬಸವರಾಜ ಕಲೆಗಾರ



# ಹುಟ್ಟು ಹಬ್ಬ

ಮಗನ ಹುಟ್ಟು ಹಬ್ಬದ ರಾತ್ರಿ
ಭುಸ್ ಎಂದು ಸದ್ದು ಮಾಡುತ್ತಾ
ಬಾಟಲಿಯೊಳಗಿನ ಬಿಯರ್
ಉಕ್ಕುಕ್ಕಿ ಉಕ್ಕೇರುತ್ತಿರುವಾಗ
ಮಗ ಮತ್ತವನ ಗೆಳೆಯರು
ಕುಣಿ ಕುಣಿದು ಚಪ್ಪಾಳೆ ತಟ್ಟುತ್ತಾ
ಒಳಗಿಳಿದ ಎಣ್ಣೆ ದೇವರ ಕೃಪೆಯಿಂದ
ಕುಪ್ಪಳಿಸಿ ಕುಪ್ಪಳಿಸಿ ಕುಪ್ಪಳಿಸುತ್ತಲೇ
ಕೇಕೆ ಹಾಕುತ್ತಿರುವಾಗ
ಟೇಬಲ್ ಮೇಲೆ ಚರ್ಮ ಸುಲಿದ
ಮೊಟ್ಟೆ, ಕೋಳಿ, ಕುರಿ, ಮೀನುಗಳು
ಬೆಂದು, ಎಣ್ಣೆಯಲಿ ತೇಲಿ, ಹೆಂಚಿನಲಿ
ಮೈ ಸುಟ್ಟು ಕೊಂಡೂ ಬಿಸಿ ಚಪ್ಪರಿಸುವ
ಮೊದಲೇ
ತಮ್ಮ ಸರದಿಗಾಗಿ ಕಾಯುತ್ತಾ
ತಣ್ಣಗಾಗುತ್ತಿವೆ.

ಹುಡುಗರ ಉತ್ಸಾಹ ಮೇರೆ ಮೀರಿತ್ತು
ಕ್ಯಾಂಪ್ ಫೈರ್‌ನ ಜ್ವಾಲೆ ಒಮ್ಮೊಮ್ಮೆ
ಮೇಲಕ್ಕೇರುತ್ತಾ
ಕೆಳಕ್ಕಿಳಿಯುತ್ತಾ ಗಾಳಿ ಬೀಸಿದತ್ತ ತೊನೆದಾಡುತ್ತಾ
ಕ್ಯಾಬರೆ ನೃತ್ಯ ಮಾಡುತ್ತಿದ್ದರೆ
ಮತ್ತಿನಲಿ ಮತ್ತೇರಿ ಮೈ ಮರೆತಿದ್ದ
ಹುಡುಗಿಯರ
ಒಲೈಸಲು ಹುಡುಗರ ಕರಾಮತ್ತು
ಕಣ್ಣಲ್ಲಿ ಆಸೆಯ ಕಿಡಿ ಮನದಲ್ಲಿ ಮನ್ಮಥ
ಲೀಲೆಯ
ಜ್ವಾಲೆ!



ಅಬ್ಬರದ ಸಂಗೀತದಲೆ, ತಾಳಕ್ಕೆ
ತಕ್ಕಂತೆ ಹೆಜ್ಜೆ ಹಾಕಲಾಗದೆ ತೂರಾಡುತ್ತಾ,
ತೇಲುತ್ತಾ, ತುಳುಕುತ್ತಾ ಒಳಗಿಳಿದ
ಪರಮಾತ್ಮನಾಡಿಸುತ್ತಿರುವ ಆಟದಲಿ ಗೆಲಲಾರದೆ
ಬೀಳುತ್ತಾ, ಏಳುತ್ತಾ ಓಲಾಡುತ್ತಾ,
ಒಳಗೆ ಬಿಸಿ ಏರಿದರೂ ತಣ್ಣಗಾಗಿಸುತ್ತಿರುವ
ಚಳಿಯ ರಾತ್ರಿ
ಚಂದ್ರನ ವಾರೆ ನೋಟ, ತಾರೆಗಳ ಕುಹಕದಾಟ
ಚಂದ್ರ ತಾರೆಯರ ಸೆರೆ ಹಿಡಿಯುತ್ತಾ, ಬಿಡುತ್ತಾ
ಮೋಸದಾಟದಲಿ ಮೋಡಗಳು ಮಗ್ನ
ಕ್ಯಾಂಪ್ ಫೈರ್ ಉರಿದು ಉರಿದು
ಬೂದಿಯಾಗುತ್ತಲೇ
ಕೊರೆವ ಚಳಿಯಲ್ಲಿ, ನಿಶೆಯ ಮತ್ತಲ್ಲಿ
ಹಾಸಿಗೆಗುರುಳಿದ ಗೆಳೆಯರ ಗುಂಪು.

ಬೆತ್ತಲೆಯಲಿ ರಾತ್ರಿಯಿಡೀ ಗಡಗಡ ನಡುಗುತ್ತಾ
ನಲುಗಿದ ಖಾಲಿ ಶೀಷೆಗಳು, ಬಿರಡೆಗಳು
ಅಮಲಿನಲಿ ಕೈ ಜಾರಿ ಬಿದ್ದಿದ್ದ ತಿನಿಸುಗಳು
ಕೈ ಒರೆಸಿ ಬಿಸುಟಿದ್ದ ಟಿಶ್ಯೂ ರಾಶಿ
ನಾಯಿಗಳು ತಿಂದು ಆಚೀಚೆ ಬಿದ್ದಿದ್ದ
ಮೂಳೆ ಮಾಂಸದ ತುಣುಕುಗಳು
ಚುಮು ಚುಮು ಬಿಸಿಲಿಗೆ ನಾಚಿ
ಸರಸರನೆ ಚೀಲದೊಳಗೆ ಅಡಗಿಕೊಂಡವು.
ಸೂರ್ಯ ನೆತ್ತಿ ಮೇಲೆ ಬಂದು ತಿವಿದಾಗ
ನಡು ಹಗಲಿನಲಿ ಉಗುಬಗೆನೆ ಎದ್ದ ಹುಡುಗರು
ಸರಸರನೆ ಎದ್ದು ಹೊರಟರು
ಕಳೆದ ರಾತ್ರಿಯ ನೆನಪೇ ಇಲ್ಲದಂತೆ !
ಮತ್ತೊಂದು ವರುಷ ಸೋರಿ ಹೋಯಿತೋ
ಸಾರ್ಥಕವಾಯಿತೋ ಅರಿವಾಗದೆ ಸ್ತಬ್ಧಳಾದೆ
ನಾನು.